**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 179/2021**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿ ಃ ಅಮೀರಲಿ**

**ದೋಷರೋಪಣೆ**

ನಾನುಃ **ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ** ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ ಆದ ನಾನು ಆರೋಪಿಯಾದ

| | |
|---|---|
| ಆರೋಪಿ:1 | ಅಮೀರಲಿ ತಂದೆ ಮಹ್ಮದಅಲಿ |
| 2. | ಮಹ್ಮದಸಲಿಂ ತಂದೆ ಯುಸೂಫ್‌ಸಾವ |

**ನಿಮ್ಮ ವಿರುದ್ಧ ದೋಷಿಸುವ ಆಪಾದನೆ ಏನೆಂದರೆ,**

ದಿನಾಂಕಃ 09-11-2020 ರಂದು ಮಃ 12-30 ಗಂಟೆ ಸುಮಾರಿಗೆ ಮುಂಡರಗಿ ಗ್ರಾಮದ ಸೀಮೆಯಲ್ಲಿ ಬರುವ ನೂರ ರೈಸ್ ಮಿಲ್ ಹತ್ತಿರ ಖುಲ್ಲಾ ಜಾಗೆಯಲ್ಲಿ ಮತ್ತು ಕೆ.ಎಸ್.ಆರ್.ಟಿ.ಸಿ ದರ್ಗಾ ಹತ್ತಿರ ಚಾಸಾಃ1 ಮತ್ತು 4 ರವರು ಮಾನ್ಯ ಜಿಲ್ಲಾಧಿಕಾರಿಗಳು ಯಾದಗಿರಿ ಅವರ ಆದೇಶದ ಮೇರೆಗೆ ಅಶೋಕನಗರ ತಾಂಡಾದಲ್ಲಿ ಸ್ಥಳ ಪರಿಶೀಲನೆ ಮಾಡಿ ಮರಳಿ ಯಾದಗಿರಿಗೆ ಬರುವಾಗ 1 ನೇ ಆರೋಪಿಯಾದ ನೀನು ಪ್ರತಿ ರೈತರಿಂದ ಹತ್ತಿ ಖರೀದಿ ಮಾಡಿ, ಒಂದು ಕ್ವಿಂಟಲ್ ಹತ್ತಿಗೆ 2 ಕೆ.ಜಿ ಹತ್ತಿ ಸೂಟ ಕಡಿತಗೊಳಿಸಿ ರೈತನಿಗೆ ಸಂದಾಯವಾಗುವ ಹಣದಲ್ಲಿ ಕಡಿತಗೊಳಿಸಿ ಮೋಸ ಮಾಡಿರುತ್ತಾನೆ ಮತ್ತು 2 ನೇ ಆರೋಪಿಯಾದ ನೀನು ಕೆ.ಎಸ್.ಆರ್. ಟಿ.ಸಿ ಎದುರುಗಡೆ ದರ್ಗಾ ಹತ್ತಿರ ಪ್ರತಿ ರೈತರಿಗೆ

ಹತ್ತಿ ಖರೀದಿ ಮಾಡಿ ಒಂದು ಕ್ವಿಂಟಲ್ ಹತ್ತಿಗೆ 2 ಕೆ.ಜಿ ಹತ್ತಿ ಸೂಟ ಅಂತಾ ಕಡಿತಗೊಳಿಸಿ 98 ಕೆ.ಜಿ ಹತ್ತಿಯ ಹಣ ಪಾವತಿ ಮಾಡಿದ್ದು ಮತ್ತು ಒಂದು ಕ್ವಿಂಟಲ್ ಹತ್ತಿಗೆ 20 ರೂ ಹಮಾಲಿ ದರವೆಂದು ಅಂತಾ ಕಡಿತಗೊಳಿಸಿ ರೈತನಿಗೆ ಸಂದಾಯವಾಗುವ ಹಣದಲ್ಲಿ ಕಡಿತಗೊಳಿಸಿ ಮೋಸ ಮಾಡಿದ್ದು, ಈ ಮೂಲಕ ನೀವು ಭಾ.ದಂ.ಸಂ. 420 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 13-08-2025**
**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ**
**ನ್ಯಾಯಾಧೀಶರು ಯಾದಗಿರಿ.**